# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560002
ದೂರವಾಣಿ: 080-22237455/22221286, ಇ-ಮೇಲ್: comm@bbmp.gov.in

ಸಂಖ್ಯೆ: ಬಿ.ಬಿ.ಎಂ.ಪಿ./ಆಕಾ/ಪಿಎಸ್‌ಆರ್ /75 /2021-22. ದಿನಾಂಕ: 11-06-2021

## ಆಂತರಿಕ ಕಛೇರಿ ಟಿಪ್ಪಣಿ

ರವರಿಗೆ,
ಪ್ರಧಾನ ಆಬಿಯಂತರರು /ಎಲ್ಲಾ
ಮುಖ್ಯ ಅಭಿಯಂತರರು

ವಿಷಯ: ಕೋವಿಡ್ ಅನ್‌ಲಾಕ್ ಪ್ರಕ್ರಿಯೆಗೆ ಪೂರಕವಾಗಿ ಸಾರ್ವಜನಿಕ ಮತ್ತು ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ನಗರದಲ್ಲಿ ದಿನಾಂಕ 14-06-2021 ರಿಂದ ಕೋವಿಡ್ ಅನ್ಲಾಕ್ ಪ್ರಕ್ರಿಯೆಗೆ ಪೂರಕವಾಗಿ ವಾಹನಗಳ ಸಂಚಾರಕ್ಕೆ ಪಾಲಿಕೆ ವತಿಯಿಂದ ಅನುಷ್ಠಾನ ಹಂತದಲ್ಲಿರುವ ಕಾಮಗಾರಿಗಳಿಂದ ಯಾವುದೇ ಅನಾನುಕೂಲವಾಗದಂತೆ ಈ ಕೆಳಗಿನ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

1. ಕಾಮಗಾರಿ ಸ್ಥಳದಲ್ಲಿ ರಸ್ತೆಯ ಮೇಲೆ ಮತ್ತು ಪಾದಚಾರಿ ಮಾರ್ಗದಲ್ಲಿ ಬಿದ್ದಿರುವ ಡೆಬ್ರಿಸ್ ಅನ್ನು ಸಂಪೂರ್ಣವಾಗಿ ತೆರವುಗೊಳಿಸುವುದು.
2. ರಸ್ತೆ ಕಾಮಗಾರಿ ಜಾರಿಯಿರುವ ಭಾಗಗಳಲ್ಲಿ ಶೇಖರಗೊಂಡಿರುವ ನಿರ್ಮಾಣ ಸಾಮಗ್ರಿಗಳಲ್ಲಿ ತಕ್ಷಣಕ್ಕೆ ಅಗತ್ಯ ಇರುವುದನ್ನು ಮಾತ್ರ ರಸ್ತೆಯ ಪಕ್ಕದ ಸ್ಥಳ ಅಥವಾ ಪಾದಚಾರಿ ಮಾರ್ಗಗಳ ಮೇಲೆ ಓಡಾಟ ಮತ್ತು ವಾಹನ ಸಂಚಾರಕ್ಕೆ ಯಾವದೇ ಅಡೆತಡೆಯಾಗದಂತೆ ಸಂಗ್ರಹಿಸಿಟ್ಟುಕೊಳ್ಳುವುದು.
3. ಕಾಮಗಾರಿ ನಡೆಯುತ್ತಿರುವ ಸ್ಥಳ ಮತ್ತು ರಸ್ತೆ ಅಗೆದಿರುವ ಭಾಗಗಳಲ್ಲಿ ಬ್ಯಾರಿಕೇಡಿಂಗ್ ಮಾಡುವುದು.
4. ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ವಾರ್ಷಿಕ ನಿರ್ವಹಣೆ ಗುತ್ತಿಗೆಯನ್ನು ನೀಡಿದ್ದು, ರಸ್ತೆ ಬದಿಯ ಚರಂಡಿ, Shoulder Drains ಗಳಲ್ಲಿ ಮಣ್ಣು ಶೇಖರಣೆಯಾಗದಂತೆ ಮತ್ತು Footpath and drain covering Slabs ಗಳ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಕ್ರಮವಹಿಸುವುದು.
5. ತೆರೆದಿರುವ ಅಥವಾ ನೀರು ಸೋರಿಕೆಯಾಗುತ್ತಿರುವ ಮ್ಯಾನ್‌ಹೋಲ್/ಚರಂಡಿಗಳನ್ನು ಕೂಡಲೇ ದುರಸ್ಥಿಪಡಿಸಲು ಜಲಮಂಡಳಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದು.
6. ವಾಹನ ಸಂಚಾರಕ್ಕೆ ಯಾವುದೇ ಅಡೆತಡೆ ಇಲ್ಲದಂತೆ ಕ್ರಮ ವಹಿಸುವುದು.

(ಗೌರವ ಗುಪ್ತ)
**ಮುಖ್ಯ ಆಯುಕ್ತರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**